85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD
6th Cross, Malleshwaram, Bengaluru – 560 003

ಮಾದರಿ ಉತ್ತರಗಳು

MODEL ANSWERS

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 4

S.S.L.C. MODEL QUESTION PAPER - 4 : 2026-27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 80] [Max. Marks : 80

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ: **8 X 1 = 8**

1. ವೆಲ್ಲೆಸ್ಲಿಯು ಕೊಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಪ್ರಾರಂಭಿಸಿದರು, ಏಕೆಂದರೆ,

   ಉತ್ತರ : (D) ನಾಗರಿಕ ಸೇವೆಗೆ ಸೇರುವವರಿಗೆ ಶಿಕ್ಷಣ ನೀಡಲು 1

2. ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ 'ಕದನ ಬಾಂದವ್ಯತ್ರಯ'ವನ್ನು ರಚಿಸಿಕೊಂಡ ರಾಷ್ಟ್ರಗಳ ಗುಂಪು

   ಉತ್ತರ : (B) ಬ್ರಿಟನ್. ಫ್ರಾನ್ಸ್. ರಷ್ಯಾ 1

3. ವಿಶ್ವ ವ್ಯಾಪಾರ ಸಂಘಟನೆಯನ್ನು 'ವಿಶ್ವ ವ್ಯಾಪಾರ ಮತ್ತು ವಾಣಿಜ್ಯದ ತೃತೀಯ ಆರ್ಥಿಕ ಆಧಾರ ಸ್ಥಂಭ' ಎಂದು ಕರೆಯಲು ಕಾರಣ, ಅದು 1

   ಉತ್ತರ : (C) ದೇಶಗಳ ಮುಕ್ತ ವ್ಯಾಪಾರ ಜಾರಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ 1

4. 'ಮಾನವ ಕುಲಂ ತಾನೊಂದೆ ವಲಂ" ಹೇಳಿಕೆಯನ್ನು ನೀಡಿದವರು

   ಉತ್ತರ : (C) ಪಂಪ 1

5. ಮೌನ ಕಣಿವೆ ಆಂದೋಲನವನ್ನು ಪ್ರಾರಂಭಿಸಲಾಯಿತು, ಏಕೆಂದರೆ

   ಉತ್ತರ : {A} ಅಣೆಕಟ್ಟು ನಿರ್ಮಾಣವನ್ನು ನಿಲ್ಲಿಸಲು 1

6. ಚಂದ್ರನ ದಕ್ಷಿಣ ಧ್ರುವದ ಬಳಿ ಬಾಹ್ಯಕಾಶ ನೌಕೆಯನ್ನು ಇಳಿಸಿದ ಮೊದಲ ದೇಶ

   ಉತ್ತರ : (A) ಭಾರತ 1

7. ಈ ಮುಂದಿನವುಗಳಲ್ಲಿ ಪ್ರತ್ಯಕ್ಷ ತೆರಿಗೆಗೆ ಉದಾಹರಣೆಯಾಗಿರುವುದು

ಉತ್ತರ : (C) ಆದಾಯ ತೆರಿಗೆ 1

8. ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ ಸಂಚರಿಸಲು ಸಹಕಾರಿಯಾಗುವ ಅಗ್ನಿ ಬಿರಟೆ ಯಾರೆಂದರೆ

ಉತ್ತರ : {A} ಉದ್ದಿಮೆದಾರ 1

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: **8 X 1 = 8**

9. ಚಿಕಾಗೋದಲ್ಲಿ ಜರುಗಿದ ವಿಶ್ವ ಧಾರ್ಮಿಕ ಸಂಸತ್ತಿನಲ್ಲಿ ಭಾಗವಹಿಸಲು ಸ್ವಾಮಿ ವಿವೇಕಾನಂದರಿಗೆ ಮೈಸೂರಿನ ಯಾವ ದೊರೆಯು ಸಹಾಯ ನೀಡಿದರು?

ಉತ್ತರ : ಹತ್ತನೇ ಜಯಚಾಮರಾಜೇಂದ್ರ ಒಡೆಯರ್ 1

10. ರಾಷ್ಟ್ರಗಳ ಸಂಘವು ಮೊದಲನೇ ಮಹಾಯುದ್ಧದ ನಂತರ ಏಕೆ ಸ್ಥಾಪನೆಯಾಯಿತು?

ಉತ್ತರ : ವಿಶ್ವದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು 1

11. ಸಾರ್ಕನ ಕೇಂದ್ರ ಕಛೇರಿ ಎಲ್ಲಿ ಸ್ಥಿತಗೊಂಡಿದೆ?

ಉತ್ತರ : ಕಠ್ಮಂಡು 1

12. ಚಿಪ್ಕೋ ಚಳವಳಿಯ ಮುಖ್ಯ ನಾಯಕರು ಯಾರು?

ಉತ್ತರ : ಸುಂದರ್ ಲಾಲ್ ಬಹುಗುಣ ಮತ್ತು ಚಾಂಡಿ ಪ್ರಸಾದ್ ಭಟ್ 1

13. ನಿರ್ಗಮಾನ ಮಾನ್ಸೂನ್ ಮಾರುತಗಳ ಕಾಲದಲ್ಲಿ ಉಷ್ಣವಲಯದ ಚಂಡಮಾರುತಗಳು ಬಂಗಾಳ ಕೊಲ್ಲಿಯಲ್ಲಿ ಆಗಾಗ ಸಂಭವಿಸುತ್ತವೆ. ಏಕೆ? 1

ಉತ್ತರ : ಸಾಗರ ಮತ್ತು ಭೂ ಪ್ರದೇಶಗಳಲ್ಲಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ

14. ವ್ಯವಹಾರಸ್ಥರು ಮತ್ತು ಕೈಗಾರಿಕೋದ್ಯಮಿಗಳು ಚಾಲ್ತಿಖಾತೆಯನ್ನು ತೆರೆಯಲು. ಏಕೆ ಆದ್ಯತೆ ನೀಡುವರು?

ಉತ್ತರ : ದಿನವೊಂದರಲ್ಲಿ ಎಷ್ಟು ಬಾರಿ ಬೇಕಾದರೂ ವ್ಯವಹರಿಸಲು ಅವಕಾಶವಿರುವುದರಿಂದ 1

15. ಜಿ.ಪಿ.ಎಸ್ ವ್ಯವಸ್ಥೆಯು 'ಮಾರ್ಗದರ್ಶಕ' ನಾಗಿ ಹೇಗೆ ಕಾರ್ಯ ನಿರ್ವಹಿಸುವುದು?

ಉತ್ತರ : ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ, ರೇಖಾಂಶ ಮತ್ತು ಸಮುದ್ರದಿಂದ ಇರುವ ಎತ್ತರದ ಆಧಾರದ ಮೇಲೆ ತಿಳಿಸುವುದರಿಂದ 1

16. ಉದ್ಯೋಗಾವಕಾಶಗಳನ್ನು ಒದಗಿಸುವ ಸರ್ಕಾರದ ಯೋಜನೆಯೊಂದನ್ನು ಹೆಸರಿಸಿ.

ಉತ್ತರ :

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ವಿಬಿ–ಜಿ–ರಾಮ್–ಜಿ)
- ಜವಹಾರ್ ರೋಜಗಾರ್ ಯೋಜನೆ
- ಐ.ಆರ್.ಡಿ,ಪಿ 1

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: **8 X 2 = 16**

17. ನೇಮಕಾತಿಯ ಪ್ರಕಾರಗಳು ಯಾವುವು?

ಉತ್ತರ : 1. ನೇರ ನೇಮಕಾತಿ 2. ಪರೋಕ್ಷ ನೇಮಕಾತಿ

ಅಥವಾ

ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳು ಯಾವುವು?

ಉತ್ತರ :

- ಕೃಷಿಯ ಪ್ರಗತಿ
- ಹಸಿವಿನಿಂದ ಮುಕ್ತಿ
- ಪೌಷ್ಟಿಕಾಂಶ ಭರಿತ ಆಹಾರ ಪೂರೈಕೆ
- ಗ್ರಾಮೀಣ ಜನರ ಜೀವನ ಸುಧಾರಣೆ (½ X 4=2)

18. ಬಾಲ ಕಾರ್ಮಿಕತೆಯ ಪರಿಣಾಮಗಳನ್ನು ವಿವರಿಸಿ.

ಉತ್ತರ :

- ಪೌಷ್ಟಿಕಾಂಶ ಭರಿತ ಆಹಾರದ ಕೊರತೆ
- ಬಲವಂತದ ದುಡಿಮೆ
- ಸಾಮಾಜಿಕ ಮತ್ತು ಆರ್ಥಿಕ ಶೋಷಣೆ
- ಆಟೋಟಗಳಿಂದ ವಂಚಿತ

- ಶಿಕ್ಷಣದಿಂದ ವಂಚಿತ

ಅಥವಾ

ಅಸ್ಪೃಷ್ಯತೆಯು ಒಂದು ಸಾಮಾಜಿಕ ಪಿಡುಗು ಆಗಿದೆ. ವಿವರಿಸಿ.

ಉತ್ತರ :

- ಮೇಲು–ಕೀಳು ಎಂದು ಜನರ ವಿಭಜನೆ
- ಉದ್ಯೋಗವಕಾಶಗಳ ನಿರಾಕರಣೆ
- ರಾಜಕೀಯ ಮತ್ತು ಆರ್ಥಿಕ ಸೌಲಭ್ಯಗಳ ನಿರಾಕರಣೆ
- ಸಾಮಾಜಿಕ ಸೌಲಭ್ಯಗಳ ನಿರಾಕರಣೆ (½ X 4=2)

19. ಪಂಚವಾರ್ಷಿಕ ಯೋಜನೆಗಳ ಮುಖ್ಯ ಉದ್ದೇಶಗಳನ್ನು ವಿವರಿಸಿ.

ಉತ್ತರ :

- ಉತ್ಪಾದನೆಯಲ್ಲಿ ಗರಿಷ್ಟ ಹೆಚ್ಚಳ
- ಉದ್ಯೋಗವಕಾಶಗಳ ನಿರ್ಮಾಣ
- ಆರ್ಥಿಕ ಅಸಮಾನತೆಗಳ ನಿರ್ಮೂಲನೆ
- ಆರ್ಥಿಕತೆಯಲ್ಲಿ ಸ್ಥಿರತೆ
- ಆರ್ಥಿಕತೆಯ ಆಧುನೀಕರಣ (½ X 4=2)

20. ಗ್ರಾಹಕರು ಎದುರಿಸುತ್ತಿರವ ಸಮಸ್ಯೆಗಳಾವುವು?

ಉತ್ತರ :

- ಬೆಲೆಗಳಲ್ಲಿ ಹೆಚ್ಚಳ
- ಮಧ್ಯವರ್ತಿಗಳ ಹಾವಳಿ
- ಕಲಬೆರಕೆ
- ತೂಕ ಮತ್ತು ಅಳತೆಗಳಲ್ಲಿ ಮೋಸ (½ X 4=2)

21. ಮೂರನೇ ಆಂಗ್ಲೋ–ಮರಾಠ ಯುದ್ದವು ಮರಾಠರ ಅವನತಿಗೆ ನಾಂದಿಯಾಯಿತು. ಈ ಹೇಳಿಕೆಯನ್ನು ಸಮರ್ಥಿಸಿ.

ಉತ್ತರ :

- ಸಹಾಯಕ ಸೈನ್ಯಪದ್ದತಿಯ ಸ್ವೀಕಾರ
- ಪೇಶ್ವೆ ಎರಡನೇ ಬಾಜಿರಾವ್ ರವರನ್ನು ಬ್ರಿಟಿಷರು ಸೋಲಿಸಿದರು
- ಮಾರಾಠ ಮುಖ್ಯಸ್ಥರುಗಳ ಪರಾಭವ
- ಬ್ರಿಟಿಷರು ಪೇಶ್ವೆ ಹುದ್ದೆಯನ್ನು ರದ್ದು ಪಡಿಸಿದರು (½ X 4=2)
- ಸತಾರದ ಆಡಳಿತಗಾರನನ್ನಾಗಿ ಬ್ರಿಟೀರು ಪ್ರತಾಪ ಸಿಂಹನನ್ನು ನೇಮಿಸಿದರು

22. ಮಧ್ಯ ಪ್ರದೇಶ ರಾಜ್ಯದ ಯಾವುದಾದರೂ ಎರಡು ಜಲವಿದ್ಯುತ್ ಯೋಜನೆಗಳನ್ನು ತಿಳಿಸಿ.

ಉತ್ತರ :

- ಬನಸಾಗರ್
- ಗಾಂಧೀಸಾಗರ್
- ಪಿಂಚ್ ಯೋಜನೆ (1 X 2=2)

23. ಭಾರತದಲ್ಲಿ ಹತ್ತಿಯು ಅತೀಮುಖ್ಯ ನಾರಿನ ಬೆಳೆಯಾಗಿದೆ. ಏಕೆ?

ಉತ್ತರ :

- ಹತ್ತಿ ಗಿರಣಿಗಳಲ್ಲಿ ಕಚ್ಚಾವಸ್ತುವಾಗಿ ಕಚ್ಚಾಹತ್ತಿಯ ಬಳಕೆ
- ಹೆಚ್ಚಿನ ಹತ್ತಿಯನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ
- ವಿದೇಶಿ ವಿನಿಮಯ ಗಳಿಕೆಗೆ ಸಹಕಾರಿ.

24. ಭಾರತದ ಒಕ್ಕೂಟದಲ್ಲಿ ಗೋವಾದ ವಿಲೀನವನ್ನು ವಿವರಿಸಿ

ಉತ್ತರ :

- ಪೋರ್ಚುಗೀಸರು ಹೆಚ್ಚಿನ ಪಡೆಗಳನ್ನು ರವನಿಸಿದರು
- ಭಾರತದ ವಿವಿಧ ಮೂಲೆಗಳಿಂದ ಬಂದ ಸತ್ಯಾಗ್ರಹಿಗಳು ಗೋವಾ ತಲುಪಿದರು
- ಗೋವಾ ಬಿಟ್ಟು ತೊಲಗಿಸಲು ಗೋವಾ ವಿಮೋಚನಾ ಚಳವಳಿ ಆರಂಭವಾಯಿತು
- ಭಾರತೀಯ ಸೇನೆ ಗೋವಾ ಪ್ರವೇಶಿಸಿ ಗೋವವನ್ನು ನಿಯಂತ್ರಣಕ್ಕೆ ಪಡೆಯಿತು (½ X 4=2)

IV. ಈ ಪ್ರತಿಯೊಂದು ಪ್ರಶ್ನೆಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರ ಬರೆಯಿರಿ **9 X 3 = 27**

25. ಡಚ್ಚರ ವಿರುದ್ಧ ಮಾರ್ತಾಂಡ ವರ್ಮನ ಹೋರಾಟವನ್ನು ವಿವರಿಸಿ.

ಉತ್ತರ :

- ಸೈನ್ಯದ ಸಹಾಯದಿಂದ ವೈನಾಡಿನ ಸುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡರು
- ಮೆಣಸು ಬೆಳೆಯುವ ಪ್ರದೇಶಗಳು ಸಹ ಇವರ ವಶವಾದವು
- ಯಾವುದೇ ವಿದೇಶಿಯರಿಗೆ ಮೆಣಸಿನ ವ್ಯಾಪಾರದ ಏಕಸ್ವಾಮ್ಯವನ್ನು ಬಿಟ್ಟು ಕೊಡಲಿಲ್ಲ
- 1741 ರ ಯುದ್ದದಲ್ಲಿ ಡಚ್ಚರನ್ನು ಸೋಲಿಸಿದನು (½ X 6=3)
- ಸುತ್ತಲಿನ ರಾಜರು ಡಚ್ಚರನ್ನು ವಿರೋಧಿಸುವಂತೆ ಮಾಡುವಲ್ಲಿ ಯಶಸ್ವಿಯಾದರು
- ಡಚ್ಚರನ್ನು ಮತ್ತೊಮ್ಮೆ ಸೋಲಿಸಿ ಅವರ ನಿಯಂತ್ರಣದಲ್ಲಿದ್ದ ಬಂದರುಗಳನ್ನು ಪಡಿಸಿಕೊಂಡರು

ಅಥವಾ

ರೈತವಾರಿ ಪದ್ದತಿಯ ಲಕ್ಷಣಗಳನ್ನು ವಿವರಿಸಿ.

ಉತ್ತರ :

- ಉಳುವವನನ್ನೆ ಭೂಮಿಯ ಒಡೆಯ ಎಂದು ಪರಿಗಣಿಸಲಾಯಿತು
- ರೈತರು ಹಾಗೂ ಕಂಪನಿಯ ನಡುವೆ ನೇರ ಸಂಪರ್ಕ ಏರ್ಪಟ್ಟಿತು
- ರೈತರು 50% ತೆರಿಗೆಯನ್ನು ಪಾವತಿಸಬೇಕಾಗಿತ್ತು
- ತೆರಿಗೆ ದರಗಳ ಅವಧಿ 30 ವರ್ಷಗಳಾಗಿತ್ತು
- ತೆರಿಗೆ ಸಂಗ್ರಹಿಸಲು ಬ್ರಿಟಿಷರು ಉಗ್ರ ಕ್ರಮಗಳನ್ನು ಅನುಸರಿಸಿದರು
- ಬೆಳೆ ವಿಫಲವಾದಾಗ ರೈತರು ತೆರಿಗೆ ಪಾವತಿಸಲು ಲೇವಾದೇವಿದಾರರಿಂದ ಸಾಲವನ್ನು ಪಡೆದರು

26. ಅರಣ್ಯನಾಶಕ್ಕೆ ಕಾರಣಗಳೇನು?

ಉತ್ತರ :

- ಕೃಷಿ ಭೂಮಿಯ ವಿಸ್ತರಣೆ
- ಪ್ರಾಣಿಗಳ ಮೇಯಿಸುವಿಕೆ
- ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ
- ನೀರಾವರಿ ಯೋಜನೆಗಳು (½ X 6=3)
- ಕೈಗಾರಿಕೀಕರಣ
- ಕಾಡ್ಗಿಚ್ಚು ಮತ್ತು ಗಣಿಗಾರಿಕೆ

ಅಥವಾ

ದೂರಸಂವೇದಿ ತಂತ್ರಜ್ಞಾನದಿಂದಾಗುವ ಉಪಯೋಗಗಳೇನು?

ಉತ್ತರ :

- ನಿಖರವಾದ ನಂಬಲರ್ಹ ಮಾಹಿತಿಗಳು ಲಭ್ಯ
- ಭೌಗೋಳಿಕ ಸರ್ವೆಗಳಿಗಿಂತ ಕಡಿಮೆ ವೆಚ್ಚದಲ್ಲಿ ವೇಗವಾಗಿ ದತ್ತಾಂಶ ವಿಶ್ಲೇಷಣೆ
- ಕಂಪ್ಯೂಟರ್‌ಗಳ ಸಹಾಯದಿಂದ ದತ್ತಾಂಶ ವಿಶ್ಲೇಷಣೆ ಸಾಧ್ಯ
- ನೈಸರ್ಗಿಕ ಪ್ರಕೋಪಗಳ ಸಂದರ್ಭದಲ್ಲಿ ಪರಿಹಾರ ಒದಗಿಸಲು ಸಹಕಾರಿ
- ದೂರಸಂವೇದಿ ಚಿತ್ರಗಳಿಂದ ಚಂಡಮಾರತಗಳ ಮತ್ತು ಪ್ರವಾಹಗಳ ಅಧ್ಯಯನ ಸಾಧ್ಯ
- ನೈಸರ್ಗಿಕ ಸಂಪನ್ಮೂಲಗಳು, ಭೂ ಬಳಕೆ, ಅರಣ್ಯಗಳು, ಜಲ ಪ್ರದೇಶಗಳು, ಜನವಸತಿ, ಕರಾವಳಿ, ಭೂ ಕುಸಿತ, ಬೆಳೆಹಾನಿ ಇತ್ಯಾದಿಗಳ ವಿಶ್ಲೇಷಣೆ ಸಾಧ್ಯ

27. ಗ್ರಾಮೀಣ ಭಾರತದ ಆರ್ಥಿಕ ಪರಿಸ್ಥಿತಿಗಳನ್ನು ವಿವರಿಸಿ.

ಉತ್ತರ :

- ಬಡತನ ಹೆಚ್ಚಾಗಿದೆ
- ಕೃಷಿಯ ಮೇಲೆ ಅಧಿಕ ಅವಲಂಬನೆ
- ಅನಕ್ಷರಸ್ಥರತೆ
- ಕಡಿಮೆ ತಲಾ ಆದಾಯ (½ X 6=3)
- ನಿರುದ್ಯೋಗ
- ಸಾಮಾಜಿಕ ಹಿಂದುಳಿಕೆ.

ಅಥವಾ

ಕೇಂದ್ರ ಸರ್ಕಾರದ ಯೋಜನೇತರ ವೆಚ್ಚಗಳು ಯಾವುವು?

ಉತ್ತರ :

- ಆಡಳಿತಾತ್ಮಕ ವೆಚ್ಚಗಳು
- ರಕ್ಷಣಾ ವೆಚ್ಚ
- ಬಡ್ಡಿ ಪಾವತಿ
- ರಾಜ್ಯಗಳಿಗೆ ಪಾಲು ಹಂಚಿಕೆ
- ವಿವಿಧ ಸಬ್ಸಿಡಿಗಳು

28. ಬ್ಯಾಂಕುಗಳ ಕಾರ್ಯಗಳಾವುವು?

ಉತ್ತರ :

- ಸಾರ್ವಜನಿಕರಿಂದ ಠೇವಣಿ ಸಂಗ್ರಹಣೆ
- ಚೆಕ್ಕುಗಳು, ಬಿಲ್ಲುಗಳು, ಡ್ರಾಪ್ಟ್‌ಗಳ ಮೂಲಕ ಹಣಪಾವತಿ
- ಸಾಲ ಮಂಜೂರಾತಿ
- ಹಣದ ವರ್ಗಾವಣೆ
- ಬಿಲ್ಲುಗಳ ತಿರುವಳಿ (½ X 6=3)
- ಭದ್ರತಾ ಕಪಾಟುಗಳ ಸೌಲಭ್ಯ
- ವಿದೇಶಿ ವಿನಿಮಯದ ಪೂರೈಕೆ

ಅಥವಾ

ಉದ್ದಿಮೆದಾರರಿಗೆ ಇರುವ ಸ್ವ–ಉದ್ಯೋಗದ ಅವಕಾಶಗಳು ಯಾವುವು?

ಉತ್ತರ :

- ಜಾಹಿರಾತು ಏಜೆನ್ಸಿಗಳು
- ಮಾರಾಟ ಏಜೆನ್ಸಿಗಳು
- ಕೈಗಾರಿಕಾ ಸಲಹಾ ಸಂಸ್ಥೆಗಳು
- ಪೋಟೋ ಕಾಫಿ ಕೇಂದ್ರಗಳು
- ಕೈಗಾರಿಕಾ ತಪಾಸಣಾ ಪ್ರಯೋಗಾಲಯಗಳು
- ಅಂತರ್ಜಾಲ ಬ್ರೌಸಿಂಗ್ ಕೇಂದ್ರಗಳು
- ಉಪಕರಣಗಳ ಬಾಡಿಗೆ ಮತ್ತು ಬೋಗ್ಯದ ಸೇವೆಗಳು

29. ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಶ್ರೀ ನಾರಾಯಣ ಗುರು ಧರ್ಮಪರಿಪಾಲನ ಯೋಗಂನ ಪಾತ್ರವು ಮಹತ್ತರವಾದುದಾಗಿದೆ. ಸಮರ್ಥಿಸಿ.

ಉತ್ತರ :

- ಶೋಷಿತ ಹಾಗೂ ಹಿಂದುಳಿದ ವರ್ಗಗಳ ಬಲವರ್ಧನೆ
- ಮಾನವರಿಗೆಲ್ಲರಿಗೂ 'ಒಂದು ದೇವರು, ಒಂದು ಜಾತಿ, ಒಂದು ಧರ್ಮ

- ಶಿಕ್ಷಣಕ್ಕೆ ಆದ್ಯತೆ (½ X 6=3)
- ಹಿಂದುಳಿದ ವರ್ಗದವರಿಗೆ ದೇವಾಲಯ ನಿರ್ಮಾಣ
- ಜಾತಿ ಆಧಾರಿತ ತಾರತಮ್ಯಕ್ಕೆ ವಿರೋಧ
- ವೈಕೋಂ ದೇವಾಲಯ ಪ್ರವೇಶ ಚಳುವಳಿಯ ಆರಂಭ

30. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮದ ಪರಿಣಾಮಗಳನ್ನು ವಿಶ್ಲೇಷಿಸಿ.

ಉತ್ತರ :

- ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಕೊನೆಗೊಂಡಿತು
- 1858 ರಲ್ಲಿ ವಿಕ್ಟೋರಿಯ ರಾಣಿಯ ಘೋಷಣೆಗಳು ಜಾರಿಗೆ ಬಂದವು
- ಮುಂದಿನ ಸ್ವಾತಂತ್ರ ಹೋರಾಟಕ್ಕೆ ದಾರಿದೀಪವಾಯಿತು
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಹಿಂಪಡೆಯಲಾಯಿತು (½ X 6=3)
- ಆಡಳಿತದಲ್ಲಿ ಭಾರತೀಯರಿಗೆ ಅವಕಾಶ ನೀಡಲು ನಿರ್ಧರಿಸಿದರು
- ಮುಂದಿನ ಹೋರಾಟಗಳಿಗೆ ಸ್ಫೂರ್ತಿ ನೀಡಿತು

31. ಮಾನವ ಹಕ್ಕುಗಳನ್ನು ರಕ್ಷಿಸಲು ಭಾರತವು ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

ಉತ್ತರ :

- ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಬೆಂಬಲಿಸಿದೆ
- ಭಾರತೀಯರಿಗೆ ಸಂವಿಧಾನದ ಮೂಲಕ ಮೂಲಭೂತ ಹಕ್ಕುಗಳನ್ನು ಮಾನ್ಯ ಮಾಡಿದೆ
- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಘೋಷಣೆಯನ್ನು ಬೆಂಬಲಿಸಿದೆ
- ಜನಾಂಗೀಯ ತಾರತಮ್ಯವನ್ನು ವಿರೋಧಿಸಿದೆ (½ X 6=3)
- ಎಲ್ಲಾ ಬಗೆಯ ಶೋಷಣೆ ಮತ್ತು ದಬ್ಬಾಳಿಕೆಯನ್ನು ವಿರೋಧಿಸುತ್ತಿದೆ
- ಎಲ್ಲಾ ಬಗೆಯ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಮಾನವ ಹಕ್ಕುಗಳಿಗೆ ಬೆಂಬಲ ನೀಡಿದೆ
- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸ್ಥಾಪನೆ
- ರಾಜ್ಯ ಮಾನವ ಹಕ್ಕುಗಳ ಆಯೋಗದ ಸ್ಥಾಪನೆ

32. ನಿರುದ್ಯೋಗದ ಕಾರಣಗಳನ್ನು ವಿವರಿಸಿ.

ಉತ್ತರ :

- ಜನಸಂಖ್ಯಾಸ್ಫೋಟ
- ಯಾಂತ್ರೀಕರಣ
- ಶ್ರಮ ವಿಭಜನೆ (½ X 6=3)
- ಸಾಮಾಜಿಕ ಅಸಮಾನತೆ
- ಬಂಡವಾಳದ ಕೊರತೆ
- ಅನಕ್ಷರತೆ

33. ಭಾರತವು ಎದುರಿಸುತ್ತಿರುವ ನೈಸರ್ಗಿಕ ವಿಕೋಪಗಳಲ್ಲಿ ಪ್ರವಾಹಗಳು ಅತ್ಯಂತ ಅಪಾಯಕಾರಿಯಾದವುಗಳು. ದೃಢೀಕರಿಸಿ.

ಉತ್ತರ :

- ಪ್ರಾಣಹಾನಿ ಮತ್ತು ಆಸ್ತಿ–ಪಾಸ್ತಿಗಳ ಹಾನಿ
- ಬೆಳೆಗಳು ಹಾಗೂ ಸಸ್ಯವರ್ಗದ ನಾಶ
- ವಿದ್ಯುತ್ ಪೂರೈಕೆ ಮತ್ತು ಸಂಪರ್ಕದಲ್ಲಿ ವ್ಯತ್ಯಯ
- ಸಾರಿಗೆ ವ್ಯವಸ್ಥೆಯ ವ್ಯತ್ಯಯ (½ X 6=3)
- ಮಣ್ಣಿನ ಸವಕಳಿ

- ಅಗತ್ಯ ಸೇವೆಗಳಲ್ಲಿ ವ್ಯತ್ಯಯ

V. ಈ ಪ್ರತಿಯೊಂದು ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. **4 X 4 = 16**

34. ಭಾರತದ ಸ್ವಾತಂತ್ರ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

ಉತ್ತರ :

- ಪ್ರಮುಖ ತೀವ್ರಗಾಮಿ ನಾಯಕರು
- 'ಸ್ವರಾಜ್ಯ ನನ್ನ ಜನ್ಮಸಿದ್ದ ಹಕ್ಕು, ಅದನ್ನು ಪಡೆದೇ ತೀರುತ್ತೇನೆ' ಎಂದು ಘೋಷಣೆ ನೀಡಿದರು
- ಗಣೇಶ ಉತ್ಸವ ಮತ್ತು ಶಿವಾಜಿ ಜಯಂತಿಗಳ ಮೂಲಕ ಜನಸಾಮಾನ್ಯರನ್ನು ಸ್ವಾತಂತ್ರ ಹೋರಾಟಕ್ಕೆ ಸಿದ್ದಗೊಳಿಸಿದರು
- ಕೇಸರಿ ಮತ್ತು ಮರಾಠ ಪತ್ರಿಕೆಗಳ ಮೂಲಕ ಜನಜಾಗೃತಿ ಮೂಡಿಸಿದರು
- ಬಂಗಾಳ ವಿಭಜನೆಯನ್ನು ವಿರೋಧಿಸಿದರು
- ಹೋಂರೂಲ್ ವಳವಳಿಯನ್ನು ಪ್ರಾರಂಭಿಸಿದರು
- ಸ್ವದೇಶಿ ಚಳುವಳಿಯ ನಾಯಕತ್ವ ವಹಿಸಿದ್ದರು
- ಲಾಲ ಲಜಪತರಾಯ್ ಮತ್ತು ಬಿಪಿನ್ ಚಂದ್ರಪಾಲ್‌ರೊಂದಿಗೆ ಸೇರಿ ಲಾಲ್–ಬಾಲ್–ಪಾಲ್ ಎಂದೇ ಪ್ರಸಿದ್ದರಾಗಿದ್ದರು
- ಗೀತ ರಹಸ್ಯ ಕೃತಿ ರಚಿಸಿದರು
- ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆ ಎರೆದರು

ಅಥವಾ

ಅನಿಬೆಸೆಂಟರ ಕೊಡುಗೆಗಳನ್ನು ವಿವರಿಸಿ.

ಉತ್ತರ :

- ಎಲ್ಲರ ಶಿಕ್ಷಣಕ್ಕಾಗಿ ಒತ್ತಾಯಿಸಿದರು
- ಸೆಂಟ್ರಲ್ ಬನಾರಸ್ ಹಿಂದೂ ಕಾಲೇಜನ್ನು ಸ್ತಾಪಿಸಿದರು
- ನ್ಯೂ ಇಂಡಿಯಾ ಮತ್ತು ಕಾಮನ್‌ವೆಲ್ತ್ ನಿಯತಕಾಲಿಕೆಗಳನ್ನು ಪ್ರಾರಂಭಿಸಿದರು
- ಸ್ವಾತಂತ್ರ ಹೋರಾಟಕ್ಕಾಗಿ ಸ್ಪೂರ್ತಿ ನೀಡಲು 'ಹೋಂರೂಲ್ ಲೀಗ್' ಪ್ರಾರಂಭಿಸಿದರು
- ಆಂಗ್ಲಭಾಷೆಗೆ 'ಭಗವದ್ಗೀತೆ'ಯನ್ನು ಭಾಷಾಂತರಿಸಿದರು
- ಶಾಲೆಗಳನ್ನು ಪ್ರಾರಂಭಿಸಿದರು (½ X 8=8)
- ವಿಧವಾ ಪುನರ್ ವಿವಾಹವನ್ನು ಬೆಂಬಲಿಸಿದರು
- ಮೂಢನಂಬಿಕೆಗಳನ್ನು ಖಂಡಿಸಿದರು
- ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು

35. ನಾವು ಹೇಗೆ ಮಣ್ಣಿನ ಸಂರಕ್ಷಣೆ ಮಾಡಬಹುದು?

ಉತ್ತರ :

- ಕಾಂಟೂರ್ ಬೇಸಾಯ
- ಅರಣ್ಯೀಕರಣಕ್ಕೆ ಆದ್ಯತೆ ನೀಡುವುದು
- ಅರಣ್ಯನಾಶ ತಡೆಯುವುದು
- ಮೇಲ್ಚಾವಣಿ ಕೃಷಿಗೆ ಪ್ರೋತ್ಸಾಹ (½ X 8=8)
- ಕೃಷಿ ಭೂಮಿಗೆ ಸುತ್ತ ಅಡ್ಡಬದುಗಳನ್ನು ನಿರ್ಮಿಸುವುದು
- ಸಾಕುಪ್ರಾಣಿಗಳ ಮೇಯುವಿಕೆಯನ್ನು ನಿಯಂತ್ರಿಸುವುದು
- ಚೆಕ್‌ಡ್ಯಾಮ್‌ಗಳ ನಿರ್ಮಾಣ
- ನೀರಿನ ಯೋಜಿತ ಬಳಕೆ

ಅಥವಾ

ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಕೈಗಾರಿಕೆಗಳು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುವುವು. ಹೇಗೆ?

ಉತ್ತರ :

- ಅಗತ್ಯ ಉತ್ಪನ್ನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು
- ಆಮದುಗಳನ್ನು ಕಡಿಮೆ ಮಾಡುವುದು
- ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಸಹಕಾರಿ
- ತಲಾವರಮಾನದ ಹೆಚ್ಚಳಕ್ಕೆ ಸಹಕಾರಿ
- ವಿದೇಶಿ ವಿನಿಮಯ ಗಳಿಕೆಗೆ ಸಹಕಾರಿ
- ಉದ್ಯೋಗವಕಾಶಗಳ ಸೃಷ್ಟಿ
- ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಏರಿಕೆ
- ಸಂಪನ್ಮೂಲಗಳ ಸದ್ಬಳಕೆ

36. ಹದಿನೆಂಟನೆಯ ಶತಮಾನವನ್ನು ಭಾರತದಲ್ಲಿ ರಾಜಕೀಯ ಸಮಸ್ಯೆಗಳ ಶತಮಾನ ಎಂದು ಏಕೆ ಕರೆಯುವರು?

ಉತ್ತರ :

- 1707 ರಲ್ಲಿ ಮೊಘಲ್ ಸಾಮ್ರಾಟ ಔರಂಗಜೇಬನ ಮರಣ
- ಫ್ರೆಂಚರು ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು
- ಬ್ರಟಿಷರೂ ಸಹ ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು
- ಮೊಘಲ್ ಸಾಮ್ರಾಟರ ಅಸಮರ್ಥತೆ (½ X 8=8)
- ಕರ್ನಾಟಿಕ್ ಪ್ರದೇಶದಲ್ಲಿನ ರಾಜಕೀಯ ಅಸ್ಥಿರತೆಗಳು
- ಚಿಕ್ಕದೇವರಾಜ ಒಡೆಯರ್‌ರವರ ಮರಣ
- ಹೈದರಾಬಾದಿನ ನಿಜಾಮ, ಮರಾಠರು ಹಾಗೂ ಕರ್ನಾಟಿಕ್ ನವಾಬರ ನಡುವಿನ ಒಳಜಗಳಗಳು
- ಭಾರತದಲ್ಲಿನ ರಾಜಕೀಯ ಅಸ್ಥಿರತೆಗಳು

37. ಲಿಂಗತ್ವ ಅಲ್ಪಸಂಖ್ಯಾತರ ಸ್ಥಾನಮಾನವನ್ನು ಸುಧಾರಿಸಲು ಸರ್ಕಾರಗಳು ಹೇಗೆ ಪ್ರಯತ್ನಿಸುತ್ತಿವೆ?

ಉತ್ತರ :


- 2019 ರ ಲಿಂಗತ್ವ ಅಲ್ಪಸಂಖ್ಯಾತರ ಸಂರಕ್ಷಣಾ ಕಾಯಿದೆ
- ಲಿಂಗ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಸಮಗ್ರ ಪುನರ್ವಸತಿ ಕಾರ್ಯಕ್ರಮ (SMILE- ಕಾರ್ಯಕ್ರಮ)
- ನ್ಯಾಷನಲ್ ಕೌನ್ಸಿಲ್ ಫಾರ್ ಟ್ರಾನ್ಸಜಂಡರ್ ಪ್ರರ್ಸನ್ಸ್ ನ ರಚನೆ
- ನ್ಯಾಷನಲ್ ಪೋರ್ಟಲ್ ಫಾರ್ ಟ್ರಾನ್ಸಜಂಡರ್ ಪ್ರರ್ಸನ್ಸ್‌ನ ಆರಂಭ
- ತಮಿಳುನಾಡು ಸರ್ಕಾರದ ಲಿಂಗತ್ವ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿ ಮಂಡಳಿ
- ಕರ್ನಾಟಕ ಸರ್ಕಾರದ ಲಿಂಗತ್ವ ಅಲ್ಪಸಂಖ್ಯಾತರ ರಾಜ್ಯನೀತಿ–2017
- ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ (½ X 8=8)
- ಚುನಾವಣೆಗಳಲ್ಲಿ ಮೀಸಲಾತಿ
- ಉಚಿತ ವೈದ್ಯಕೀಯ ಸೇವೆಗಳು

VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸಿ: 5 X 1 = 5

a) $23^0, 30^1$ ಉತ್ತರ ಅಕ್ಷಾಂಶ
b) ರಾಣಪ್ರತಾಪ ಸಾಗರ
c) ನೀಲಗಿರಿ ಬೆಟ್ಟಗಳು
d) ಬಾಂಬೆ ಹೈ
e) ದಾವಣಗೆರೆ
f) ವಿಶಾಖಪಟ್ಟಣಂ
g) ಭಾರತದ ಚಹಾದ ಬಂದರು.
h) ದಾಮೋದರ್ ಯೋಜನೆ

i) ಮೌಂಟ್ ಗಾಡ್ವಿನ್ ಆಸ್ಟಿನ್

j) ಕೈಗಾ



ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ (ಪ್ರಶ್ನೆ ಸಂಖ್ಯೆ 38 ಕ್ಕೆ ಬದಲಾಗಿ)

ಹಿಮಾಲಯ ಪರ್ವತ ಪ್ರದೇಶಗಳ ಪ್ರಾಮುಖ್ಯತೆಗಳಾವುವು?.

ಉತ್ತರ:

- ದೇಶಕ್ಕೆ ರಕ್ಷಣೆ
- ಖನಿಜ ಸಂಪನ್ಮೂಲಗಳ ಆಗರ
- ಪ್ರವಾಸೋದ್ಯಮ
- ಅರಣ್ಯ ಸಂಪತ್ತು
- ಶೀತ ಮಾರತಗಳಿಗೆ ತಡೆ
- ನದಿಗಳ ಜನ್ಮಸ್ಥಾನ
- ಪ್ರಾಣಿ ಹಾಗೂ ಸಸ್ಯ ಸಂಪತ್ತಿಗೆ ಆಶ್ರಯ
- ಧಾರ್ಮಿಕ ಪುಣ್ಯಕ್ಷೇತ್ರಗಳು
- ಭಾರತೀಯರ ಜನಜೀವನದ ಮೇಲೆ ಪ್ರಭಾವ

ಅಥವಾ

ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಉದ್ದೇಶಗಳಾವುವು?

ಉತ್ತರ :

- ನೀರಿನ ಪೂರೈಕೆ
- ವಿದ್ಯುತ್ತಿನ ಪೂರೈಕೆ
- ಮೀನುಗಾರಿಕೆ
- ಮನೋರಂಜನೆ
- ನೀರಾವರಿ
- ಪ್ರವಾಹ ನಿಯಂತ್ರಣ
- ಮಣ್ಣಿನ ಸವಕಳಿಯ ನಿಯಂತ್ರಣ
- ಜಲಸಾರಿಗೆ
- ಅರಣ್ಯ ಸಂಪತ್ತಿನ ಸೃಷ್ಟಿ